## ಮಕ್ಕಳಿಗೆ ಪ್ರೋತ್ಸಾಹ ಅತ್ಯವಶ್ಯ!

ಝೀ ಕನ್ನಡದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಸ್ಪರ್ಧಿಗಳ ಕೌಶಲ್ಯ ಅತ್ಯದ್ಭುತ. ಸ್ಪರ್ಧಿಗಳು ತಮ್ಮ ಕುಶಲತೆಯನ್ನು ಪ್ರದರ್ಶಿಸುವಾಗ ಮೈಯಲ್ಲಿ ಮೂಳೆಗಳು ಇರುವ ಬಗ್ಗೆಯೇ ಸಂಶಯ ಮೂಡುತ್ತೆ. ಈ ಮಾದರಿಯ ತರಬೇತಿ ಹಾಗೂ ಅವಕಾಶಗಳನ್ನು ಒದಗಿಸಿದರೆ, ಒಲಿಂಪಿಕ್ಸ್ ಸ್ಪರ್ಧೆಗಳಲ್ಲಿ ಅಕ್ರೋಬ್ಯಾಟಿಕ್ಸ್ – ಜಿಮ್ನಾಸ್ಟಿಕ್ಸ್ ವಿಭಾಗಗಳಲ್ಲಿ ಯಶಸ್ವಿಯಾಗುವ ಸಾಧ್ಯತೆಗಳಿವೆ. ವಾಹಿನಿ ಇಂತಹ ಕೌಶಲ್ಯಗಳಿಗೆ ಪ್ರೋತ್ಸಾಹಿಸುವಲ್ಲಿ ಮನಸ್ಸು ಮಾಡಲಿ.

—ರಾಜೀವ್ ಎಸ್. ಮಾಗಲ್

## ದುರಹಂಕಾರದ ದೃಷ್ಟಾಂತ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಕನ್ನಡ ಭಾಷೆಯ ಕೆಲವು ಶಬ್ದಗಳ ಸರಳ ಬಳಕೆಗಳನ್ನು ಉತ್ಕೃಷ್ಟವಾಗಿ ವಿಮರ್ಶಿಸುವ ಭುವಿಯ ಕನ್ನಡತನ ಕಥೆಯ ಘನತೆ ಹೆಚ್ಚಿಸುತ್ತದೆ. ಈ ಪರಿಪಾಠ ಕನ್ನಡ ಬಳಸುವವರ ಜ್ಞಾನ ಹೆಚ್ಚಿಸಬಲ್ಲದು.

ಲಾಯರ್ ಸಂಗಡ ತನ್ನ ಸಂದೇಹವನ್ನು ನಿವಾರಿಸಿಕೊಂಡು ಭುವಿ ಹೊರಗೆ ಬಂದಾಗ ಅವಳ ಪಾದರಕ್ಷೆ ಅದಲು ಬದಲಾಗಿರುತ್ತದೆ. ಅಲ್ಲೇ ಬಿಟ್ಟು ಹೊಗಿದ್ದ ಪಾದರಕ್ಷೆಗಳನ್ನು ಸಂಕೋಚವಿಲ್ಲದೆ ಕೈನಲ್ಲಿ ಹಿಡಿದು ಸಾನಿಯಾಳ ಬಳಿ ಬಂದು ಅದಲು ಬದಲಾದ ವಿಷಯ ತಿಳಿಸಿ ಅವಳು ತಂದ ಚಪ್ಪಲಿಗಳನ್ನು ಸೌಜನ್ಯದಿಂದ ಅವಳ ಪಾದದ ಮುಂದೆ ಇಡುತ್ತಾಳೆ. ಅದನ್ನು ಲೆಕ್ಕಿಸದ ಸಾನಿಯಾ ದುರಹಂಕಾರದಿಂದ ಜಾಡಿಸಿ ದೂರಕ್ಕೆ ಬಿಸಾಡುತ್ತಾಳೆ. ಭುವಿ ಅದಕ್ಕೆ ಪ್ರತಿಕ್ರಿಯಿಸದೆ ಸೌಮ್ಯವಾಗಿ ಧರಿಸಿಕೊಳ್ಳುವುದು ಅವಳ ಸೌಜನ್ಯಶೀಲತೆಗೆ ಸಾಕ್ಷಿ. ಸೂಕ್ಷ್ಮಮತಿಗಳು ಅವರ ಜಾಣತನ ಗುರುತಿಸಬಲ್ಲರು.

—ಟಿ.ಎಂ. ಶಿವಶಂಕರ್, ಬಸವೇಶ್ವರನಗರ

## ಧಾರಾವಾಹಿಗಳು ಮತ್ತು ಒಂಟಿಯ ಕಥೆ

ಕನ್ನಡಕ್ಕೆ ಡಬ್ಬಿಂಗ್ ಮಾಡಿದ ಸಿನಿಮಾಗಳು ನಮ್ಮ ಕಿರುತೆರೆಗೆ ಧಾಂಗುಡಿ ಇಟ್ಟು ಬಹಳ ತಿಂಗಳುಗಳೇ ಆಯ್ತು. ಈಗ ನಾವೇನು ಕಡಿಮೆ ಅಂತಾ ಕೆಲವು ಪ್ರಮುಖ ವಾಹಿನಿಗಳು ಅನ್ಯಭಾಷೆಯ ಧಾರಾವಾಹಿಗಳನ್ನು ಪ್ರಸಾರ ಮಾಡುತ್ತಿದ್ದಾರೆ!

ಬಹುಶಃ ಈ ವಾಹಿನಿಗಳ ಹತ್ತಿರ ಕನ್ನಡದ ಸರಕು ಮುಗಿದು ಹೋಗಿರಬೇಕು ಎಂದೆನಿಸುತ್ತದೆ. ಕೆಲ ಧಾರಾವಾಹಿಗಳು ಮರು ಪ್ರಸಾರ ಆಗುತ್ತವೆ. ಡಬ್ ಮಾಡಲಾದ ಧಾರಾವಾಹಿಗಳು ಕರ್ನಾಟಕದ ಪರಂಪರೆ, ಸಂಸ್ಕೃತಿ ಮತ್ತು ಇಲ್ಲಿನ ಸೊಗಡಿಗೆ ಎಳ್ಳಷ್ಟೂ ಹೊಂದಿಕೊಳ್ಳುವುದಿಲ್ಲ. ಧಾರಾವಾಹಿಗಳ ಮುಖ್ಯಜೀವಾಳ ಸಂಭಾಷಣೆ ಡಬ್ ಕಥೆಯಲ್ಲಿ ಸಂಭಾಷಣೆ ಅಸಹನೀಯ.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಮಂಗಳಮುಖಿಯರಿಗೂ ಮನ್ನಣೆ ಸಿಗುವಂತೆ ಆಗಲಿ

ಝೀ ಕನ್ನಡದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್'ನಲ್ಲಿ ಗ್ರಾಮೀಣ ಪ್ರತಿಭೆಗಳು, ಅಂಗವಿಕಲರನ್ನು ಗುರುತಿಸಿ ವೇದಿಕೆಗೆ ಕರೆತರುತ್ತಿದ್ದಾರೆ ಇದರಿಂದ ಅವರ ಪ್ರತಿಭೆಗೆ ಮತ್ತಷ್ಟು ಮೆರುಗು ಬಂದಿದೆ.

ಈ ಬಾರಿ ಅಂಗವಿಕಲ ಸಮಸ್ಯೆ ಇರುವ ಹುಬ್ಬಳ್ಳಿಯ ಚೈತ್ರಾಲಿ ನೃತ್ಯದ ಮೂಲಕ ಮೋಡಿ ಮಾಡಿದ್ದಾಳೆ. ಆಕೆ ಅನೇಕರಿಗೆ ಸ್ಫೂರ್ತಿ ತಂದಿದ್ದಾಳೆ. ಕಿವಿ ಕೇಳದ, ಮಾತುಬಾರದ ಹುಡುಗಿಗೆ ಡ್ಯಾನ್ಸ್ ಕಲಿಸುವುದೂ ಸಾಹಸವೇ ಸರಿ. ಚೈತ್ರಾಲಿ ತಾಯಿ ಜೊತೆಯಾಗಿ ಸಹಕಾರ ನೀಡುತ್ತಿದ್ದಾರೆ.

ಅಂಗವಿಕಲರ ಕುರಿತು 'ಸುಧಾ' ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ 'ಕೊರತೆ ಮೀರಿದ ಧೀರರು' ವಿಶೇಷ ಲೇಖನ ತುಂಬ ಉಪಯುಕ್ತವಾಗಿದೆ. ಅಂತೆಯೇ ಮಂಗಳಮುಖಿಯರಾದ ಕೆಲವರಲ್ಲಿ ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಟೀವಿಗಳಲ್ಲಿ ಅವಕಾಶ ನೀಡಬೇಕು.

—ಎಂ.ಎಸ್. ಉಷಾ ಪ್ರಕಾಶ್

## ಬೆರಗು ಹುಟ್ಟಿಸಿದ ಡಾನ್ಸರ್

ಝೀ ಕನ್ನಡ 'ಡಾನ್ಸ್ ಕರ್ನಾಟಕ ಡಾನ್ಸ್'ನಲ್ಲಿ ಚೈತ್ರಾಲಿ ನೃತ್ಯ ಮಾಡುವುದನ್ನು ನೋಡಿದರೆ ಆಕೆಗೆ ಶ್ರವಣ ದೋಷ ಇದೆ ಎಂದು ಊಹಿಸಲು ಸಾಧ್ಯವೇ ಇಲ್ಲ. ಬೇರೆ ಸ್ಪರ್ಧಿಗಳಿಗೆ ಸರಿಸಮವಾಗಿ ನೃತ್ಯ ಮಾಡುತ್ತಾಳೆ. ತೀರ್ಪುಗಾರರಿಂದಲೂ ಒಳ್ಳೆಯ ಕಾಮೆಂಟ್ಸ್ ಪಡೆದಿದ್ದಾಳೆ. ಆಕೆಯ ಸಾಧನೆಯ ಹಿಂದೆ ಆಕೆಯ ತಾಯಿಯ ತಾಳ್ಮೆ, ಪರಿಶ್ರಮವನ್ನು ಮೆಚ್ಚಲೇ ಬೇಕು.

—ಕೆ.ಎಸ್. ಸವಿತ, ಬೆಂಗಳೂರು

## ವೇಗದ ಮಾರ್ಗ ಯಾವುದು

ಝೀ ಕನ್ನಡದ 'ಜೊತೆ ಜೊತೆಯಲಿ' ಆರಂಭದಲ್ಲಿ ಬಹಳ ಕುತೂಹಲ ಕೆರಳಿಸಿತ್ತು. ಮಧ್ಯದಲ್ಲಿ ಬೇರೆ ಧಾರಾವಾಹಿಗಳ ಜಾಡು ಹಿಡಿಯುತ್ತಿತ್ತು. ಮತ್ತೆ ಸರಿದಾರಿಗೆ ಬರುತ್ತಿತ್ತು. ಕೆಲವೊಮ್ಮೆ ಅದು ಕಥೆಯ ಹಂದರದಿಂದಲೇ ಜಾರಿದ್ದೂ ಇದೆ. ಇತ್ತೀಚಿನ ಒಂದು ಸಂಚಿಕೆಯಲ್ಲಿ ಆರ್ಯ ಸಾಹೇಬರು ಅನು ಜೊತೆ ಕಚೇರಿಯಲ್ಲಿ ಕುಳಿತಿದ್ದಾಗ ಅವನ ತಮ್ಮ ಹರ್ಷ, ತಾಯಿ ಅನು ಮನೆಗೆ ಹೋದರು ಎಂದು ಗೊತ್ತಾಗುತ್ತದೆ. ಆರ್ಯ ತಕ್ಷಣ ಅನು ಮನೆಗೆ ಹೊರಡುತ್ತಾರೆ. ಅನು ತಂದೆ ಒಂದೇ ಒಂದು ಮಾತು ಹೇಳಿ ಮುಗಿಸುವಷ್ಟರಲ್ಲಿ ಆರ್ಯ ಅವರ ಮನೆಗೆ ಬಂದಿರುತ್ತಾರೆ. ಎಲ್ಲಿ ಕಚೇರಿ, ಎಲ್ಲಿ ಅನು ಮನೆ? ಅಷ್ಟು ಬೇಗ ಹೇಗೆ ಬರಲು ಸಾಧ್ಯ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಕುಚೋದ್ಯ ಸಲ್ಲದು

ಡಬಲ್ ಮೀನಿಂಗ್, ಡಬಲ್ ಗೇಮ್, ವ್ಯಂಗ್ಯ ಅತಿರೇಕದ ಮಾತಿನ ಬಗ್ಗೆ ಕಲಿಯಸಲು ಟೀವಿ ನೋಡಬೇಕು ಎಂದೆನಿಸುತ್ತದೆ. ಅದರಲ್ಲೂ ಕಲರ್ಸ್ ಕನ್ನಡದ 'ಮಜಾ ಟಾಕೀಸ್' ಅದಕ್ಕೆ ಸೂಕ್ತವಿದ್ದಂತಿದೆ. ಮನರಂಜನೆ–ಹಾಸ್ಯದ ಹೆಸರಿನಲ್ಲಿ ಕುಚೋದ್ಯ ಸಲ್ಲದು. ಕಾರ್ಯಕ್ರಮದಲ್ಲಿ ಸೃಜನಶೀಲತೆ ಮಂಗಮಾಯ. ಮನಸ್ಸು ಮಾಡಿದರೆ ಅತ್ಯುತ್ತಮ ಮನರಂಜನೆ ನೀಡಬಹುದು.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಸೀರೆ ಯಾಕೆ?

ಭಾರತೀಯ ನಾರಿ ಎಂದಾಕ್ಷಣ ನಮ್ಮ ಕಣ್ಮುಂದೆ ಬರುವುದು ಕಲಾತ್ಮಕವಾಗಿ ಸೀರೆಯುಟ್ಟ ನಾರಿಯ ರೂಪ. ನಮ್ಮ ದೇಶದ ಸೀರೆಗೆ ಅದರದೇ ಗಾಂಭೀರ್ಯ ಇದೆ. ಆ ಸಂಸ್ಕೃತಿ ಉಳಿಯಬೇಕಾದರೆ ಅದರ ಉಪಯೋಗ ಸರಿಯಾಗಿ ಆಗಬೇಕು.

ಹಿಂದೆ ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳು ಮನೆಯ ಹೊರಗೆ ಹೋಗುವಾಗ ಸೀರೆಯನ್ನು ಲಕ್ಷಣವಾಗಿ ತೊಡುತ್ತಿದ್ದರು. ಆದರೆ ಈಗಿನ ಸೀರಿಯಲ್ ನಟಿಯರು ಮತ್ತು ಜಾಹೀರಾತು ಮಾಡಲ್‌ಗಳು ಸೀರೆ ಉಡುವ ವಿನ್ಯಾಸ ಅದರ ಗಂಭೀರತೆಯನ್ನು ಗಾಳಿಗೆ ತೂರಿಬಿಟ್ಟಿದೆ. ಸೆರಗನ್ನು ಮೈ ತುಂಬಾ ಅಲ್ಲ ದಾರದ ಎಳೆಯಂತೆ ಹಾಕಿಕೊಳ್ಳುತ್ತಾರೆ. ಎಕ್ಸ್‌ಪೋಸ್ ಉದ್ದೇಶವಾದರೆ ಸೀರೆಯೇ ಯಾಕೆ ಬೇಕು?

—ಪುಷ್ಪಾ ಎನ್.ಕೆ. ರಾವ್ ಉಡುಪಿ

## ಜಾಹೀರಾತೂ ಮುಖ್ಯ

ಮಹಿಳಾ ಕಾಯಕೋತ್ಸವ ರಾಜ್ಯ ಸರಕಾರದ ಒಂದು ಕಾರ್ಯಕ್ರಮ. ಇದಕ್ಕೆ ಕೆಲವು ಟೀವಿ ಕಲಾವಿದರನ್ನು ಬಳಸಿಕೊಂಡು ಒಂದು ಜಾಹೀರಾತು ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿದೆ. ಇದರ ಬದಲು ಆ ಕಾರ್ಯಕ್ರಮದ ನೇರ ಫಲಾನುಭವಿಗಳನ್ನೇ ಬಳಸಿಕೊಂಡು ಜಾಹೀರಾತು ಮಾಡಿದ್ದರೆ ಅದು ಸುಲಭವಾಗಿ ಅವಶ್ಯಕತೆ ಇರುವ ಹೆಚ್ಚು ಜನರನ್ನು ತಲುಪುವಲ್ಲಿ ಸಹಾಯಕವಾಗುತ್ತಿತ್ತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು